

# ಕನಸು ಅರಳುವ ಸ್ವರ್ಗ ಸದೃಶ ಗ್ರಾಮ

ಅಧ್ಯಾಯ1

ನಾನು ನನ್ನ ಕತೆ ಹೇಳಲು ಹೊರಟಿದ್ದೇನೆ. ಇದನ್ನು ಆತ್ಮಕತೆಯೆಂಬ ಪ್ರಕಾರಕ್ಕೆ ಸೇರಿಸಬೇಕೆಂದೇನೂ ಇಲ್ಲ. ಅಷ್ಟು ದೊಡ್ಡ ವ್ಯಕ್ತಿ ನಾನೆಂದು ಹೇಳಲು ಸಾಧ್ಯವಿಲ್ಲವಲ್ಲ. ಮೊದಲ ಹೃದಯಾಘಾತವಾದ ನಂತರ ಎರಡನೆಯ ಆಘಾತಕ್ಕೆ ಕಾಯುತ್ತಿರುವಾಗಲಲ್ಲವೆ ಆತ್ಮಕತೆ ಬರೆಯಬೇಕೆಂದೆನಿಸುವುದು. ಅದಲ್ಲವೆಂದಾದರೆ ಹೈಪರ್ ಟೆನ್ಷನ್ ಅಥವಾ ಮಲಿಗ್ನನ್ಸಿಯೋಗೆ ತುತ್ತಾಗಿರಬೇಕು. ಅದೂ ಅಲ್ಲವಾದರೆ ವಯಸ್ಸು ಎಪ್ಪತ್ತರ ಗಡಿಯನ್ನು ದಾಟಬೇಕು. ಆದರೆ ನನ್ನ ವಿಷಯದಲ್ಲಿ ಇದು ಯಾವುದೂ ಕಾರಣವಲ್ಲ. ಈಗಲೂ ನಾನು ಯೌವನದ ಬಿಸುಪು ಕಳೆದುಕೊಂಡಿಲ್ಲ. ಆತ್ಮಕತೆ ಬರೆಯುವಷ್ಟು ಖ್ಯಾತನಾಮನೂ ನಾನಲ್ಲ. ಆದರೆ ಅನುಭವ ನನ್ನನ್ನು ಸಂಪನ್ನಗೊಳಿಸಿದೆ. ದುರದೃಷ್ಟ ಕೂಡ ನನ್ನ ಜೊತೆಗಿದೆ. ಅಂತಹ ಅನುಭವ, ದುರದೃಷ್ಟಗಳೆಲ್ಲಾ ತುಂಬಿ ತುಳುಕುತ್ತಿರುವಾಗ ಬರೆಯದೆ ಇರಲು ಹೇಗೆ ಸಾಧ್ಯ? ಎಲ್ಲವನ್ನು ಮನಸ್ಸಿನಲ್ಲಿಯೇ ಬಹುಕಾಲ ಬಲವಂತವಾಗಿ ತಡೆಹಿಡಿದರೆ ನನ್ನ ತಲೆ ಸಿಡಿದು ಹೋಳಾಗಬಹುದು.

ಎಷ್ಟು ಸುಂದರವಾಗಿತ್ತು ನನ್ನ ಹಳ್ಳಿ! ವಿಶಾಲವಾದ ಗದ್ದೆ. ಗದ್ದೆಯ ಒಂದು ಅಂಚಿನಲ್ಲಿ ದೊಡ್ಡದೊಂದು ಕೊಳ. ಕೊಳದಲ್ಲಿ ಈಜಾಡಿ ಈಜಾಡಿ ಉಬ್ಬಿ ಆಯಾಸ ಪರಿಹರಿಸಿಕೊಳ್ಳಲು ಹಾವಸೆ ಮೆತ್ತಿರುವ, ಜಾರುವ, ನಯವಾದ ಬಂಡೆಗಲ್ಲುಗಳ ಮೇಲೆ ಹತ್ತಿ ಕುಳಿತಿರುವ ಗೊಂಕರು ಕಪ್ಪೆಗಳು! ಬಯಲಿನ ಮಧ್ಯೆ ಲ್ಯಾಂಡ್‌ಸ್ಕೇಪ್ ಪೆಯಿಂಟಿಗಿನಂತೆ ಎತ್ತರಕ್ಕೆ ಬೆಳೆದು ಬಳಕುತ್ತಾ ನಿಂತಿರುವ ಒಂಟಿ ತೆಂಗಿನ ಮರ. ಬಯಲಿನ ಸುತ್ತಲೂ ತೆಂಗಿನ ಗರಿಗಳು ಮತ್ತು ಮಂಗಳೂರು ಹೆಂಚು ಹಾಸಿದ ಮನೆಗಳು. ಹೊಲದಲ್ಲಿ ಬೆಳೆದು ನಿಂತಿರುವ ತೆಂಗು, ಕಂಗು, ಬಾಳೆ, ಮಾತಳನಿಂಬೆ, ಮಾವು, ಕರಿಬೇವು ಮರಗಳು. ಸಾಲಾಗಿ ನಿಂತಿರುವ ಪಪ್ಪಾಯಿ ಮರಗಳು. ಹಕ್ಕಿಗಳು ಅರ್ಧಕುಕ್ಕಿ ತಿಂದ ಪೇರಳೆ ಹಣ್ಣುಗಳನ್ನು ಹೊತ್ತು ನಿಂತಿರುವ ಮರಗಳು. ಹಸಿರು ಹುಲ್ಲಿನ ರಾಶಿಗಳು!

ಅರಳಿ ನಿಂತಿರುವ ತುಂಬೆ ಹೂಗಳು. ಅದರ ಪಕಳೆಗಳ ಮೇಲೆ ಫಳಫಳಿಸುವ ಸೂರ್ಯರಶ್ಮಿಗಳು. ಹಸಿರುಹುಲ್ಲಿನ ರಾಶಿಯ ಹಿಂದೆ ಕುರುಚಲು ಗಿಡಗಳ ಕಾಡು. ಬೆಟ್ಟದಿಂದ ನಿರಂತರವಾಗಿ ಬೆಳ್ಳಿರೇಖೆಯಂತೆ ಹರಿದು ಬರುತ್ತಿರುವ ಝರಿಗಳು. ರಾತ್ರೆಗಳಲ್ಲಿ ಬೆಟ್ಟ ಇಳಿದು ಬಂದು ಕುರುಚಲು ಗಿಡಗಳ ಹಿಂದೆ ಹೊಂಚುಹಾಕಿ ಕುಳಿತು ಆಡಿನ ಮರಿಗಳನ್ನು ಹಿಡಿಯಲು ಬರುವ ಹುಲಿಗಳು, ಕಾಡು ಮತ್ತು ಬೆಟ್ಟಗಳಿಂದ ಸುತ್ತುವರಿದ ತೆಂಗಿನ ತೋಟದ ಅಂಚಿನಲ್ಲಿ ಹರಿದಾಡುತ್ತಿರುವ ಕೇರೆ ಹಾವುಗಳು, ತೋಡಿನ ಬದಿಯಲ್ಲಿ ಎಲೆಯುದುರಿದ ರೆಂಬೆಗಳಲ್ಲಿ ಅರಳಿದ ನೀಲಿ ಹೂವುಗಳಂತೆ ಕಾಣುವ ಹಕ್ಕಿಗಳು, ಚಿಗುರೆಲೆಗಳನ್ನು ಪೋಣಿಸಿದ ಹಂಚಿಕಡ್ಡಿಯನ್ನು ಕಚ್ಚಿ ಹಿಡಿದು, ಹಗ್ಗದ ನಡುಗಟ್ಟಿನ ಮರದ ಜೇಬಿನಲ್ಲಿರಿಸಿದ ಕುಟ್ಟುಗತ್ತಿಯನ್ನಿಟ್ಟು, ತೆಂಗನ್ನು ಮರಕುಟುಕನಂತೆ ಏರಿ ಏರಿ ಹೋಗುವ ಸೇಂದಿ ಇಳಿಸುವ ಮಂದಿ.

ನಿಜ, ನನಗೆ ನನ್ನ ಹಳ್ಳಿಯ ಪ್ರಕೃತಿ ದೃಶ್ಯಗಳು ಸದಾ ಶಕ್ತಿ ನೀಡುತ್ತಿರುತ್ತವೆ. ಎಲ್ಲಾಹಳ್ಳಿಗಳಂತೆ ನನ್ನ ಹಳ್ಳಿಗೂ ಒಂದು ಹೆಸರಿದೆ ಕೋಟೆಬಾಗಿಲು. ಮೊದಲು ಇದಕ್ಕೆ 'ಕೋಟೆ ಬಾಗಿಲ ಬಳಿ' ಎಂಬ ಹೆಸರಿತ್ತು. ಕೊನೆ ಕೊನೆಗೆ 'ಬಳಿ' ಮಾಯವಾಗಿ ಕೋಟೆ ಬಾಗಿಲು ಉಳಿದುಕೊಂಡಿತು. ಯಾವುದೇ ರಾಜನ ಕೋಟೆಗಿರುವ ದಾರಿ ಪ್ರಾರಂಭವಾಗುವುದು ನನ್ನ ಹಳ್ಳಿಯ ಪೂರ್ವ ಗಡಿಯ ಬಳಿಯಿಂದಂತೆ. ಅದಕ್ಕೆ ಸಾಕ್ಷಿಯಾಗಿ ಸ್ವಲ್ಪ ದೂರದಲ್ಲಿ ಕೆಂಗಲ್ಲಿನ ಪಾಳುಬಿದ್ದ ಗೋಡೆಯೊಂದಿದೆ. ಅದು ಐದಾರು ಮೀಟರಿನಷ್ಟು ಉದ್ದಕ್ಕೆ ಹಬ್ಬಿಕೊಂಡಿದೆ. ಅದು ಈಗಲೂ ಇರುವುದು ವಿಶೇಷ.

ಇದು ಯಾವ ರಾಜನಕೋಟೆ ಎಂಬುದು ಅಸಲಿಗೆ ಇತಿಹಾಸಕಾರರಿಗೇ ಗೊತ್ತಿಲ್ಲ. ಹಿಂದಿನ ಕಾಲದ ಇತಿಹಾಸಕಾರರೆಂದರೆ ಪ್ರಾಥಮಿಕ ಶಾಲೆಯ ಮೇಷ್ಟ್ರುಗಳು. ಅವರು ಬಾಯಿಗೆ ಬಂದಿದ್ದನ್ನು ಒದರಿದರೆ ಚರಿತ್ರೆಯಾಗಿ ಬದಲಾಗುತ್ತದೆ. ಅವರ ಪೈಕಿ ಒಬ್ಬ ಮೇಷ್ಟ್ರ ಇತಿಹಾಸದ ವ್ಯಾಖ್ಯಾನ